"ಮಧುರ ಮಕ್ಕಳೇ - ತಂದೆ ಭಕ್ತರ ಹಾಗೂ ಮಕ್ಕಳ ರಕ್ಷಣೆ ಮಾಡುವಂತಹ ಭಕ್ತವತ್ಸಲನಾಗಿದ್ದಾರೆ, ಪತಿತರಿಂದ ಪಾವನ ಮಾಡಿ ಮನೆಗೆ ಕರೆದೊಯ್ಯುವ ಜವಾಬ್ದಾರಿಯು ತಂದೆಯದೇ ಹೊರತು ಮಕ್ಕಳ ಜವಾಬ್ದಾರಿಯಲ್ಲ"

ಪ್ರಶ್ನೆ: ತಂದೆಯ ಕಲ್ಪ-ಕಲ್ಪದ ಜವಾಬ್ದಾರಿ ಏನಾಗಿದೆ? ಯಾವ ಚಿಂತೆಯು ಕೇವಲ ತಂದೆಗೆ ಇರುತ್ತದೆ?

ಉತ್ತರ: ಮಕ್ಕಳಿಗೆ ರಾಜಯೋಗವನ್ನು ಕಲಿಸಿ ಪಾವನ ಮಾಡುವುದು ತಂದೆಯ ಕರ್ತವ್ಯವಾಗಿದೆ. ನಾನು ಹೋಗಿ ಎಲ್ಲರನ್ನು ದುಃಖದಿಂದ ಬಿಡಿಸಿ ಸುಖಿಗಳನ್ನಾಗಿ ಮಾಡೋಣವೆಂಬ ಚಿಂತೆಯು ಕೇವಲ ತಂದೆಗೇ ಇರುತ್ತದೆ.

ಗೀತೆ: ಮುಖವನ್ನು ನೋಡಿಕೋ ಪ್ರಾಣಿ........

ಓಂ ಶಾಂತಿ. ಇದನ್ನು ಯಾರು ಕೇಳುತ್ತಿದ್ದಾರೆ? ಯಾವ ತಂದೆಗೆ ಸರ್ವಶಕ್ತಿವಂತನೆಂದು ಕರೆಯಲಾಗುತ್ತದೆ. ಮುಕ್ತಿಧಾತ, ಮಾರ್ಗದರ್ಶಕನೆಂದು ತಂದೆಯ ಮಹಿಮೆಯನ್ನು ಮಾಡುತ್ತಾರೆ. ಅವರು ಎಲ್ಲರನ್ನೂ ಸದ್ಗತಿ ಮಾಡುವವರಾಗಿದ್ದಾರೆ. ಹಾಗೂ ಸರ್ವರ ದುಃಖಹರ್ತ-ಸುಖಕರ್ತನಾಗಿದ್ದಾರೆ. ಅವರು ಪರಮಧಾಮದಲ್ಲಿ ಇರುವವರೆಂದು ತಿಳಿದುಕೊಡಿದ್ದಾರೆ ಆದರೆ ಅಜ್ಞಾನಕ್ಕೆ ವಶರಾಗಿ ಸರ್ವವ್ಯಾಪಿಯೆಂದು ಹೇಳುತ್ತಾರೆ. ಮಕ್ಕಳೆಲ್ಲರೂ ಭಕ್ತರಾಗಿದ್ದಾರೆ ಮತ್ತು ಭಗವಂತ ತಂದೆಯಾಗಿದ್ದಾರೆ. ನಮ್ಮ ತಂದೆಯು ದುಃಖಹರ್ತ-ಸುಖಕರ್ತನಾಗಿದ್ದಾರೆಂದು ಎಲ್ಲಾ ಮಕ್ಕಳಿಗೂ ತಿಳಿಸಿಕೊಡಬೇಕು. ಅವರನ್ನು ಭಕ್ತವತ್ಸಲ ಎಂಬ ಹೆಸರಿನಲ್ಲಿ ಮಹಿಮೆ ಮಾಡಲಾಗುತ್ತದೆ. ಯಾವುದೇ ಗುರು-ಗೋಸಾಯಿಗಳಿಗೆ ಈ ಹೆಸರನ್ನು ಕೊಡಲು ಸಾಧ್ಯವಿಲ್ಲ. ಈಗ ಅನೇಕ ಭಕ್ತರು ಅಥವಾ ಮಕ್ಕಳಂತು ಬಹಳ ಮಂದಿಯಿದ್ದಾರೆ, ಅವರ ಮೇಲೆ ದಯೆ ತೋರಿಸುವವರು ಒಬ್ಬರೇ ತಂದೆಯಾಗಿದ್ದಾರೆ. ಒಬ್ಬ ತಂದೆಯೇ ಬಂದು ಇಡೀ ಪ್ರಪಂಚಕ್ಕೆ ಸುಖ-ಶಾಂತಿಯನ್ನು ಕೊಡುತ್ತಾರೆ. ಲಕ್ಷ್ಮೀ-ನಾರಾಯಣರ ರಾಜ್ಯಕ್ಕೆ ಸ್ವರ್ಗ ಅಥವಾ ವೈಕುಂಠವೆಂದು ಕರೆಯಲಾಗುತ್ತದೆಯೆಂದು ತಿಳಿಸುತ್ತಿದ್ದಾರೆ. ಈ ಸಮಯದಲ್ಲಿ ಕಲಿಯುಗವಿರುವ ಕಾರಣ ತಂದೆಗೆ ಎಷ್ಟೊಂದು ಚಿಂತೆಯಿರುತ್ತದೆ. ಶರೀರದ ತಂದೆಗೂ ಚಿಂತೆಯಿರುತ್ತದೆಯಲ್ಲವೇ! ಇವರು ಬೇಹದ್ದಿನ ತಂದೆಯಾಗಿದ್ದಾರೆ. ಎಲ್ಲಾ ಭಕ್ತರ ಕಲ್ಯಾಣಕಾರಿ ಒಬ್ಬರೇ ತಂದೆಯಾಗಿದ್ದಾರೆ, ಹೋಗಿ ಎಲ್ಲಾ ಮಕ್ಕಳನ್ನು ಸುಖಿಗಳನ್ನಾಗಿ ಮಾಡೋಣವೆಂಬ ಚಿಂತೆಯು ಅವರಿಗೆ ಮಾತ್ರ ಇರುತ್ತದೆಯೆಂದು ತಿಳಿದಿರಬೇಕು. ಯಾವಾಗ ಮನುಷ್ಯರಿಗೆ ಆಪತ್ತುಗಳು ಬರುತ್ತವೆ, ಆಗ ಭಗವಂತನ್ನು ಹೇ! ಪರಮಪಿತ ಪರಮಾತ್ಮ ರಕ್ಷಿಸು ಎಂದು ನೆನಪು ಮಾಡುತ್ತಾರೆ. ಈಗ ನೀವು ಮಕ್ಕಳ ಸಮ್ಮುಖದಲ್ಲಿ ತಂದೆಯು ಕುಳಿತಿದ್ದಾರೆ. ಈಗ ಎಲ್ಲರೂ ಪತಿತರಾಗಿದ್ದಾರೆ, ನಾನು ಹೋಗಿ ಎಲ್ಲರಿಗೂ ರಾಜಯೋಗವನ್ನು ಕಲಿಸಿ ಪಾವನ ಮಾಡೋಣವೆಂಬ ಚಿಂತೆ ಬರುವುದಿಲ್ಲವೇನು? ಇದಂತು ನನ್ನ ಕಲ್ಪ-ಕಲ್ಪದ ಕರ್ತವ್ಯವಾಗಿದೆ. ಈ ಸಮಯದಲ್ಲಿ ಎಲ್ಲರೂ ಪರಮಾತ್ಮನನ್ನು ಕರೆದರೂ ಸಹ ಮನಃಪೂರ್ವಕವಾದ ಪ್ರೀತಿಯಿಲ್ಲ. ಈಗ ನೀವು ಪೂರ್ಣ ನಾಟಕವನ್ನು ತಿಳಿದುಕೊಂಡಿದ್ದೀರಿ. ನಾನು ನಿಮ್ಮನ್ನು ಪಾವನ ಮಾಡಲು ಬಂದಿದ್ದೇನೆಂದು ತಂದೆಯು ತಿಳಿಸುತ್ತಾರೆ. ನೀವು ಈ ನನ್ನ ಮಾತುಗಳನ್ನು ಒಪ್ಪಿಕೊಳ್ಳಬೇಕಲ್ಲವೇ! ಸನ್ಯಾಸಿಗಳೂ ಸಹ ವಿಕಾರಗಳನ್ನು ಬಿಡುತ್ತಾರೆ, ಆದರೆ ಅವರದ್ದು ಹದ್ದಿನ ಸನ್ಯಾಸವಾಗಿದೆ. ನಮ್ಮ ಸನ್ಯಾಸ ಇಡೀ ಹಳೆಯ ಪ್ರಪಂಚವನ್ನು ಸನ್ಯಾಸ ಮಾಡುವ ಬೇಹದ್ದಿನ ಸನ್ಯಾಸವಾಗಿದೆ. ತಂದೆಯು ಎಷ್ಟೊಂದು ಚೆನ್ನಾಗಿ ತಿಳಿಸುತ್ತಿದ್ದಾರೆ. ಪ್ರಜಾಪಿತ ಬ್ರಹ್ಮಾಕುಮಾರರು ಹಾಗೂ ಕುಮಾರಿಯರು ಪ್ರತ್ಯಕ್ಷವಾಗಿದ್ದಾರಲ್ಲವೇ! ಬೋರ್ಡ್ ಸಹ ಹಾಕಲಾಗಿದೆ. ಬಹಳ ಮಕ್ಕಳಿದ್ದಾರೆ, ಎಲ್ಲರೂ ಮಾಮ್ಮಾ-ಬಾಬಾ ಎಂದು ಹೇಳುತ್ತಾರೆ. ಗಾಂಧೀಜಿಗೂ ಸಹ ರಾಷ್ಟ್ರಪಿತನೆಂದು ಹೇಳತ್ತಾರೆ. ಅವರೂ ಸಹ ಭಾರತದ ಪಿತನಾಗಿದ್ದಾರೆಯೇ ವಿನಃ ಇಡೀ ಪ್ರಪಂಚವು ಅವರನ್ನು ಪಿತನೆಂದು ಹೇಳುವುದಿಲ್ಲ. ಇಡೀ ಪ್ರಪಂಚದ ಪಿತ ಒಬ್ಬರೇ ಆಗಿದ್ದಾರೆ. ಆ ತಂದೆಯು ಕಾಮ ಮಹಾಶತ್ರುವೆಂದು ಹೇಳುತ್ತಿದ್ದಾರೆ, ನೀವು ಅದರ ಮೇಲೆ ವಿಜಯಿಗಳಾಗಬೇಕು. ಇಂತಹ ಪ್ರಪಂಚದಲ್ಲಿ ಯಾವುದೇ ಸುಖವಿಲ್ಲ. ಪವಿತ್ರ ದೇವಿ-ದೇವತೆಗಳ ಮುಂದೆ ಹೋಗಿ ತಲೆ ಬಾಗುತ್ತಾರೆ, ಆದರೆ ಏನೂ ತಿಳಿದುಕೊಂಡಿಲ್ಲ. ಮಕ್ಕಳೇ, ಈ ಅಂತಿಮ ಜನ್ಮದಲ್ಲಿ ಪವಿತ್ರವಾದಾಗ 21 ಜನ್ಮಗಳವರೆಗೆ ನಿಮ್ಮ ಕಾಯಕಲ್ಪತರು ಮಾಡುತ್ತೇನೆಂದು ತಂದೆಯು ಹೇಳುತ್ತಾರೆ. ಇದು ಬಹಳ ಸಹಜವಾಗಿದೆ ಆದರೆ ಮಾಯೆಯು ಈ ರೀತಿಯಿದೆ ಅದು ಮಕ್ಕಳನ್ನು ಸೋಲಿಸಿ ಬಿಡುತ್ತದೆ. ಒಂದುವೇಳೆ 4-5 ತಿಂಗಳು ಪವಿತ್ರವಾಗಿರುತ್ತಾರೆ. ಆದರೂ ಸಹ ನಿರಾಸೆ ಆಗಿ ಬಿಡುತ್ತಾರೆ. ಕಲ್ಪದ ಮೊದಲಿನಂತೆ ತಿಳಿಸುತ್ತಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಕೌರವರು-ಪಾಂಡವರನ್ನು ಸಹೋದರ-ಸಹೋದರರನ್ನಾಗಿ ತೋರಿಸುತ್ತಾರೆ. ಅವರು ಬೇರೆ-ಬೇರೆ ದೇಶ ಅಥವಾ ಊರಿನವರಲ್ಲ. ಪತಿತ-ಪಾವನ ತಂದೆಯು ಭಾರತದಲ್ಲಿಯೇ ಬರುತ್ತಾರೆ. ಭಾರತ ತಂದೆಯ ಜನ್ಮಸ್ಥಾನವಾಗಿದೆ. ಭಾರತದಲ್ಲಿಯೇ ಶಿವ ಜಯಂತಿಯನ್ನು ಆಚರಣೆ ಮಾಡುತ್ತಾರೆ. ಭಾರತದಲ್ಲಿಯೇ ನಿರಾಕಾರ ಶಿವ ಪರಮಾತ್ಮ ಜನ್ಮ ತೆಗೆದುಕೊಳ್ಳುತ್ತಾರೆ, ಅವರ ಹೆಸರು ಶಿವ ಎಂದಾಗಿದೆ. ಅವರಿಗೆ ಶರೀರವಿಲ್ಲ. ಆದರೆ ಬ್ರಹ್ಮಾ, ವಿಷ್ಣು, ಶಂಕರರಿಗೂ ಚಿತ್ರವಿದೆ. ಶ್ರೇಷ್ಠಾತಿ ಶ್ರೇಷ್ಠ ಒಬ್ಬ ಭಗವಂತ ಆಗಿದ್ದಾರೆ. ಅವರು ಇವರಲ್ಲಿ (ಬ್ರಹ್ಮಾ) ಪ್ರವೇಶವಾಗುತ್ತಾರೆ. ಆದರೆ ಹೇಗೆ ಬರುತ್ತಾರೆ? ಯಾವಾಗ ಬರುತ್ತಾರೆ? ಇದು ಯಾರಿಗೂ ಗೊತ್ತಿಲ್ಲ. ಭಾರತದಲ್ಲಿಯೇ ಶಿವ ಜಯಂತಿಯನ್ನು ಆಚರಿಸುತ್ತಾರೆ. ಶಿವನ ಮಂದಿರವು ಭಾರತದಲ್ಲಿಯೇ ಅತಿ ದೊಡ್ಡದಾಗಿದೆ. ಆ ಮಂದಿರದಲ್ಲಿ ಲಿಂಗವನ್ನು ಇಟ್ಟಿದ್ದಾರೆ ಅಂದಮೇಲೆ ಶಿವನು ಅಗತ್ಯವಾಗಿ ಬರುತ್ತಾರೆಂದು

ತಿಳಿಸಬೇಕು ಆದರೆ ಶರೀರವಿಲ್ಲದೆ ಏನೂ ಮಾಡಲು ಆಗುವುದಿಲ್ಲ. ಆತ್ಮ ಸುಖ-ದುಃಖವನ್ನು ಶರೀರದ ಮೂಲಕ ಭೋಗಿಸುತ್ತದೆ. ಅವರು ಪತಿತ-ಪಾವನನಾಗಿದ್ದಾರೆ ಆದರೆ ಅವರು ಹೇಗೆ ಬಂದು ಎಲ್ಲರನ್ನು ಪಾವನ ಮಾಡುತ್ತಾರೆಂದು ಯಾರೂ ತಿಳಿದುಕೊಂಡಿಲ್ಲ. ಈಗ ಸಾಧಾರಣ ಶರೀರದಲ್ಲಿ ಪ್ರವೇಶ ಮಾಡಿ ಪಾತ್ರವನ್ನು ಅಭಿನಯಿಸುತ್ತಾರೆ. ಆದುದರಿಂದ ಬ್ರಹ್ಮನ ಮೂಲಕ ಸ್ಥಾಪನೆ ಎಂದು ಗಾಯನವಿದೆ. ಹಾಗಾದರೆ ಈ ಪತಿತ ಪ್ರಪಂಚದಲ್ಲಿ ಬ್ರಹ್ಮ ಎಲ್ಲಿಂದ ಬಂದರು? ನನಗೆ ಶರೀರವಿಲ್ಲವೆಂದು ಸ್ವಯಂ ಪರಮಾತ್ಮ ಹೇಳುತ್ತಾರೆ, ಆದುದರಿಂದ ನಾನು ಇವರಲ್ಲಿ ಪ್ರವೇಶ ಮಾಡಿದ್ದೇನೆ. ನನ್ನ ಹೆಸರು ಶಿವ ಎಂದಾಗಿದೆ. ನೀವೀಗ ನನ್ನ ಮಕ್ಕಳಾಗಿದ್ದೀರಿ, ಆದುದರಿಂದ ನಿಮ್ಮ ಹೆಸರೂ ಸಹ ಪರಿವರ್ತನೆ ಆಗುತ್ತದೆ. ಯಾರು ಸನ್ಯಾಸಿಗಳ ಬಳಿ ಹೋಗಿ ಸನ್ಯಾಸತ್ವವನ್ನು ಸ್ವೀಕಾರ ಮಾಡುತ್ತಾರೆ, ಅವರ ಹೆಸರೂ ಸಹ ಬದಲಾವಣೆ ಆಗುತ್ತದೆ. ಈಗ ತಂದೆಯು ಮಕ್ಕಳ ಸಮ್ಮುಖದಲ್ಲಿ ಬಂದಿದ್ದಾರೆ. ಅರ್ಧಕಲ್ಪದಿಂದ ಯಾವ ಈಶ್ವರನನ್ನು ನೆನಪು ಮಾಡಿದಿರಿ, ನಂತರ ನಡೆಯುತ್ತಾ-ನಡೆಯುತ್ತಾ ಅವರನ್ನೂ ಸಹ ಮರೆತು ಹೋಗುತ್ತೀರಿ. ಸನ್ಯಾಸಿಗಳು ಸುಖವನ್ನು ಒಪ್ಪಿಕೊಳ್ಳುವುದಿಲ್ಲ, ಅವರು ಸುಖವನ್ನು ಕಾಗವಿಷ್ಟ ಸಮಾನವೆಂದು ತಿಳಿದುಕೊಳ್ಳುತ್ತಾರೆ ಆದರೆ ಸ್ವರ್ಗದ ಹೆಸರು ಬಹಳ ಪ್ರಖ್ಯಾತವಾಗಿದೆ ಆದುದರಿಂದ ಯಾರೇ ಶರೀರ ಬಿಟ್ಟಾಗ ಸ್ವರ್ಗಕ್ಕೆ ಹೋದರೆಂದು ಹೇಳುತ್ತಾರೆ. ಹೊಸ ಪ್ರಪಂಚವನ್ನು ಸುಖಧಾಮ, ಹಳೆಯ ಪ್ರಪಂಚವನ್ನು ದುಃಖಧಾಮವೆಂದು ಕರೆಯಲಾಗುತ್ತದೆ. ತಂದೆಯು ಇಷ್ಟೊಂದು ಹೇಳುತ್ತಿರುವಾಗ ಏಕೆ ಅವರ ಮತದಂತೆ ಪೂರ್ಣವಾಗಿ ನಡೆಯಬಾರದು? ತಂದೆಯು ಎಲ್ಲರಿಗೂ ಮುಕ್ತಿ-ಜೀವನ್ಮುಕ್ತಿಯನ್ನು ಕೊಡಲು ಬಂದಿದ್ದಾರೆ. ಮಕ್ಕಳಿಗೆ ಆಸ್ತಿ ಕೊಡುವುದು ತಂದೆಯ ಪಾತ್ರವಾಗಿದೆ. ನಿರಾಕಾರ ರಚಯಿತ ತಂದೆಯಿಂದ ಆಸ್ತಿಯು ಹೇಗೆ ಸಿಗುತ್ತದೆಯೆಂದು ನೀವಷ್ಟೇ ತಿಳಿದುಕೊಂಡಿದ್ದೀರಿ. ನಿಮಗೆ ನನ್ನ ಪರಿಚಯ ಹೇಗೆ ಪ್ರಾಪ್ತಿಯಾಯಿತು? ಭಗವಾನುವಾಚ: ನಾನು ಕೃಷ್ಣನಾಗಿದ್ದೇನೆಯೇ! ನಾನು ಬ್ರಹ್ಮಾ ಆಗಿದ್ದೇನೆಯೇ! ಇಲ್ಲ. ನಾನು ಎಲ್ಲಾ ಆತ್ಮಗಳ ನಿರಾಕಾರ ತಂದೆ ಆಗಿದ್ದೇನೆ. ಈ ರೀತಿ ಬೇರೆ ಯಾರೂ ಹೇಳಲು ಸಾಧ್ಯವಿಲ್ಲ. ಒಂದುವೇಳೆ ತಮ್ಮನ್ನು ಶಿವೋಹಂ ಎಂದು ಹೇಳುತ್ತಾರೆ ಆದರೆ ನಾನು ಎಲ್ಲಾ ಆತ್ಮಗಳಿಗೂ ತಂದೆಯಾಗಿದ್ದೇನೆಂದು ಹೇಳಲು ಸಾಧ್ಯವಿಲ್ಲ. ಅವರು ತಮ್ಮನ್ನು ಗುರು ಎಂದು ಹೇಳಿಕೊಳ್ಳುತ್ತಾರೆ. ಅಲ್ಲಿ ತಂದೆ ಹಾಗೂ ಶಿಕ್ಷಕನು ಸಿಗದೆ ಒಮ್ಮೆಯೇ ಗುರು ಸಿಗುತ್ತಾರೆ. ಇಲ್ಲಿ ನಿಯಮದನುಸಾರ ಜ್ಞಾನವಿದೆ. ಇಲ್ಲಿ ನಿಮ್ಮ ತಂದೆ, ಶಿಕ್ಷಕ, ಗುರು ನಾನೊಬ್ಬನೇ ಆಗಿದ್ದೇನೆ. ಇಡೀ ಪ್ರಪಂಚವನ್ನು ಹೇಗೆ ಪಾವನ ಮಾಡುತ್ತೇನೆಂದು ಆಶ್ಚರ್ಯ ಪಡಬೇಕು. ಪ್ರತೀ ಹೆಜ್ಜೆಯನ್ನು 21 ಜನ್ಮಗಳಿಗೆ ಆಸ್ತಿ ಕೊಡುವಂತಹ ತಂದೆಯ ಮತದಂತೆ ನಡೆಯಬೇಕು ಏಕೆಂದರೆ ಮಾಯೆಯು ಬಹಳ ಬಲಶಾಲಿಯಾಗಿದೆ. ಬಾಬಾ-ಬಾಬಾ ಎಂದು ಹೇಳುತ್ತಾ ಓದುತ್ತಲೂ ಇರುತ್ತಾರೆ ಆದರೆ ಮಾಯೆಗೆ ವಶವಾಗಿ ತಂದೆಗೆ ವಿಚ್ಛೇದನ ಕೊಟ್ಟರು. ಆದುದರಿಂದ ತಂದೆಯೂ ಸಹ ಎಚ್ಚರಿಕೆಯಿಂದ ಇರಬೇಕೆಂದು ಹೇಳುತ್ತಾರೆ. ಇಲ್ಲಂತು ಅನ್ಯರ ಸೇವೆ ಮಾಡಬೇಕು, ಅನ್ಯರನ್ನು ತಮ್ಮ ಸಮಾನ ಮಾಡಿಕೊಳ್ಳುವಂತಹ ಸೇವೆ ಮಾಡಬೇಕು. ನನಗೆ ಈ ಸಹಯೋಗ ಕೊಡುವುದಿಲ್ಲವೇ? ತಂದೆಗೆ ವಿಚ್ಛೇದನ ಕೊಟ್ಟು ತಂದೆ ಹೆಸರಿಗೆ ಕಳಂಕ ತರುವವರನ್ನು ನನಗೆ ಸಹಯೋಗ ಕೊಡುವವರೆಂದು ಹೇಳುವುದಿಲ್ಲ. ಎಷ್ಟೊಂದು ಶ್ರಮವಾಗುತ್ತದೆ? ಅಬಲೆಯರ ಮೇಲೆ ಬಹಳ ಹತ್ಯಾಚಾರ ನಡೆಯುತ್ತದೆ. ಜ್ಞಾನ ಯಜ್ಞದಲ್ಲಿ ವಿಘ್ನಗಳು ಬೀಳುತ್ತವೆ. ಮಾಯೆಯು ಎಷ್ಟೊಂದು ಬಿರುಗಾಳಿಯನ್ನು ತರುತ್ತದೆ ಆದರೆ ಭಕ್ತಿಮಾರ್ಗದಲ್ಲಿ ಈ ರೀತಿ ಆಗುವುದಿಲ್ಲ.

ಬುದ್ಧಿವಂತ ಮಕ್ಕಳೇ, ನೀವು ನನ್ನ ಮತದಂತೆ ನಡೆಯಿರಿ ಎಂದು ತಂದೆ ಹೇಳುತ್ತಾರೆ. ನಾನು ಯಾವುದೇ ವಿಕರ್ಮ ಮಾಡಲಿಲ್ಲವೇ ಎಂದು ತಮ್ಮ ಮನಸ್ಸೆಂಬ ದರ್ಪಣದಲ್ಲಿ ನೋಡಿಕೊಳ್ಳಬೇಕು. ತಂದೆಯ ಮಕ್ಕಳಾಗಿ ಸ್ವಲ್ಪ ವಿಕರ್ಮ ಮಾಡಿದರೆ ನೂರುಪಟ್ಟು ಶಿಕ್ಷೆಗೆ ಗುರಿಯಾಗಿ ಬಹಳ ನಷ್ಟ ಮಾಡಿಕೊಳ್ಳುತ್ತೀರಿ. ನಾವು ಖಾತೆಯನ್ನು ಜಮಾ ಮಾಡಿಕೊಳ್ಳುತ್ತಿದ್ದೇವೆಯೇ ಅಥವಾ ಇಲ್ಲವೇ ಎಂದು ನೋಡಿಕೊಳ್ಳಬೇಕು. ಮಾಯೆಯ ಬಿರುಗಾಳಿಯನ್ನು ಓಡಿಸಬೇಕಾಗಿದೆ. ನಿಮ್ಮ ಸ್ಥಿತಿ ಈ ರೀತಿ ಮಾಡಿಕೊಂಡಾಗ ತಂದೆಯ ಹೃದಯವನ್ನು ಗೆದ್ದು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತೀರಿ. ನಮ್ಮ ಸಿಂಹಾಸನ ಹೇಗಿರುತ್ತದೆ ಎಂದು ನೀವು ತಿಳಿದುಕೊಂಡಿದ್ದೀರಿ. ಶಿವ ತಂದೆಯ ಮಂದಿರವನ್ನು ನಿರ್ಮಿಸುತ್ತೀರೆಂದರೆ ನಿಮ್ಮ ಅರಮನೆ ಎಷ್ಟೊಂದು ಸುಂದರ ಹಾಗೂ ಶ್ರೇಷ್ಠವಾಗಿರುತ್ತದೆ! ನಾನು ನಿಮ್ಮನ್ನು ವಿಶ್ವದ ಮಾಲೀಕರನ್ನಾಗಿ ಮಾಡುತ್ತೇನೆ. ಅಲ್ಲಿ ನಿಮ್ಮ ಬಳಿ ಅಪಾರ ಧನವಿರುತ್ತದೆ ನಂತರ ನೀವು ನನ್ನ ಮಂದಿರವನ್ನು ನಿರ್ಮಿಸುತ್ತೀರಿ. ಎಲ್ಲಾ ಧನವನ್ನು ಮಂದಿರ ಕಟ್ಟುವುದಕ್ಕಾಗಿ ಉಪಯೋಗಿಸುವುದಿಲ್ಲ. ನಾವು ವಿಶ್ವದ ಮಾಲೀಕರಾಗಿದ್ದೇವೆಂದು ಈಗ ನೀವು ತಿಳಿದುಕೊಂಡಿದ್ದೀರಿ. ಅಲ್ಲಿ ವಿಶ್ವ ಮಹಾರಾಜನಿಗೆ ಧನದಾತನೆಂದು ಹೇಳಲಾಗುತ್ತದೆ. ಅವನೇ ಭಕ್ತಿಮಾರ್ಗದಲ್ಲಿ ಎಷ್ಟೊಂದು ದೊಡ್ಡ ಮಂದಿರವನ್ನು ಮಾಡಿದ್ದಾನೆ, ನೀವೂ ಸಹ ಮಾಡುತ್ತೀರಿ. ದ್ವಾಪರ ಯುಗದಲ್ಲಿ ಎಲ್ಲಾ ರಾಜರ ಬಳಿ ಮಂದಿರವಿರುತ್ತದೆ. ಮೊಟ್ಟ ಮೊದಲು ಶಿವನ ಮಂದಿರವನ್ನು ಕಟ್ಟುತ್ತಾರೆ ನಂತರ ದೇವತೆಗಳ ಮಂದಿರವನ್ನು ನಿರ್ಮಿಸುತ್ತಾರೆ. ತಂದೆಯು ಈಗ ನೀವು ಮಕ್ಕಳಿಗೆ ಎಷ್ಟೊಂದು ಸತ್ಯ ಸಮಾಚಾರವನ್ನು ತಿಳಿಸುತ್ತಾರೆ, ಈ ವಿದ್ಯೆಯಿಂದ ನೀವು ಮಕ್ಕಳಿಗೆ ಬಹಳ ಖುಷಿಯಾಗಬೇಕು. ಪುರುಷಾರ್ಥದಿಂದ ನಾವು ಈ ರೀತಿಯಾಗುತ್ತೇವೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ, ಮತ್ತೇಕೆ ನೀವು ಶ್ರೀಮತದಂತೆ ನಡೆಯುವುದಿಲ್ಲ? ಏಕೆ ನೀವು ಮರೆಯುತ್ತೀರಿ? ಇದೊಂದು ಕಥೆಯಾಗಿದೆ. ಹೇಗೆ ಮನೆಯಲ್ಲಿ ಮಿತ್ರ ಸಂಬಂಧಿಗಳು ಕಥೆಗಳನ್ನು ಹೇಳುತ್ತಾರೆ, ಹಾಗೆಯೇ ತಂದೆಯೂ ಸಹ ನಿಮಗೆ ಇಡೀ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಕಥೆಯನ್ನು ಹೇಳುತ್ತಾರೆ. ನೀವು 5000 ವರ್ಷದ ಮೊದಲು ವಿಶ್ವದ ಮಾಲೀಕರಾಗಿದ್ದಿರಿ. ನೀವು ಮಕ್ಕಳು ಈ ರೀತಿ ಆಗಬೇಕೆಂದು ಪ್ರತಿನಿತ್ಯ ತಂದೆಯು ಕಥೆಯನ್ನು ತಿಳಿಸುತ್ತಾರೆ. ರಾಜ್ಯಭಾಗ್ಯ ತೆಗೆದುಕೊಳ್ಳಲು ತಮ್ಮನ್ನು ಯೋಗ್ಯರನ್ನಾಗಿ ಮಾಡಿಕೊಳ್ಳಿ. ಇದು ಸತ್ಯ ನಾರಾಯಣ ಕಥೆಯಾಗಿದೆ. ಈ ಕಥೆಯನ್ನು ನೀವು ಕೇಳಿದ ನಂತರ ಅಮರರನ್ನಾಗಿ ಮಾಡಲು

ಅನ್ಯರಿಗೂ ಹೇಳಬೇಕು. ನಂತರ ಭಕ್ತಿಮಾರ್ಗದಲ್ಲಿ ಕಥೆಯನ್ನು ಹೇಳುತ್ತೀರಿ. ಸತ್ಯ-ತ್ರೇತಾಯುಗದಲ್ಲಿ ಈ ಜ್ಞಾನವು ಮರೆತು ಹೋಗುತ್ತದೆ. ತಂದೆಯು ಎಷ್ಟೊಂದು ಸರಳವಾಗಿ ನಡೆದುಕೊಳ್ಳುತ್ತಾರೆ, ನಾನು ನಿಮ್ಮ ಸೇವಕನಾಗಿದ್ದೇನೆಂದು ಹೇಳುತ್ತಾರೆ. ನೀವು ದುಃಖಿಗಳಾದಾಗ ಬಂದು ನಮ್ಮನ್ನು ವಿಶ್ವದ ಮಾಲೀಕರನ್ನಾಗಿ ಮಾಡಿ ಎಂದು ನನ್ನನ್ನು ಕರೆಯುತ್ತೀರಿ. ಪತಿತರನ್ನು ಪಾವನ ಮಾಡಿ ಆದರೆ ಮನುಷ್ಯರು ಏನನ್ನೂ ತಿಳಿದುಕೊಂಡಿಲ್ಲ. ತಂದೆಯು ನಮ್ಮನ್ನು ಪತಿತರಿಂದ ಪಾವನ ಮಾಡುತ್ತಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ ಆದುದರಿಂದ ಇಂತಹ ತಂದೆಯನ್ನು ಮರೆಯಬಾರದು. ನೀವೂ ಸಹ ಇಂತಹ ಶ್ರೇಷ್ಠ ಸೇವೆಯನ್ನು ಮಾಡಬೇಕು. ತಂದೆಯನ್ನು ನೆನಪು ಮಾಡಬೇಕು ಹಾಗೂ ಮನೆಗೆ ಹಿಂತಿರುಗಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಪ್ರತಿನಿತ್ಯ ಯಾವುದೇ ವಿಕರ್ಮ ಮಾಡಿ ತನಗೂ ಹಾಗೂ ಅನ್ಯರಿಗೂ ನಷ್ಟ ಮಾಡುವುದಿಲ್ಲವೇ ಎಂದು ತಮ್ಮ ಮನಸ್ಸೆಂಬ ದರ್ಪಣದಲ್ಲಿ ನೋಡಿಕೊಳ್ಳಬೇಕು. ಬುದ್ಧಿವಂತರಾಗಿ ತಂದೆಯ ಮತದಂತೆ ನಡೆಯಬೇಕು, ಭೂತಗಳನ್ನು ಓಡಿಸಬೇಕು.

2. ತಂದೆಯು ಹೇಳುವ ಸತ್ಯ ಸಮಾಚಾರ ಅಥವಾ ಕಥೆಯನ್ನು ಕೇಳಿ ಅನ್ಯರಿಗೂ ತಿಳಿಸಬೇಕು.

ವರದಾನ: ಪ್ರತೀ ಸಮಯ ತಮ್ಮ ಹೃದಯದಲ್ಲಿ ತಂದೆಯ ಪ್ರತ್ಯಕ್ಷತೆಯ ಧ್ವಜಾರೋಹಣ ಮಾಡುವಂತಹ ಧೃಡ ಸಂಕಲ್ಪಧಾರಿ ಭವ.

ಹೇಗೆ ಸ್ನೇಹದ ಕಾರಣ ಪ್ರತಿಯೊಬ್ಬರ ಹೃದಯದಲ್ಲಿ ಇದೇ ಬರುತ್ತದೆ - ನಾವು ತಂದೆಯವರನ್ನು ಪ್ರತ್ಯಕ್ಷಗೊಳಿಸಲೇ ಬೇಕು. ಇದೇ ರೀತಿ ತಮ್ಮ ಸಂಕಲ್ಪ, ನುಡಿ ಹಾಗೂ ಕರ್ಮದ ಮೂಲಕ ಹೃದಯದಲ್ಲಿ ಪ್ರತ್ಯಕ್ಷತೆಯ ಧ್ವಜಾರೋಹಣ ಮಾಡಿರಿ, ಸದಾ ಖುಷಿಯಲ್ಲಿರುವ ನರ್ತನ ಮಾಡುತ್ತಿರಿ. ಕೆಲವೊಮ್ಮೆ ಖುಷಿಯಾಗಿದ್ದು ಕೆಲವೊಮ್ಮೆ ಬೇಸರವಾಗಿರಬಾರದು. ಎಲ್ಲಿಯವರೆಗೆ ಜೀವಿಸಿರುತ್ತೇನೆಯೋ ಅಲ್ಲಿಯವರೆಗೆ ಖುಷಿಯಾಗಿರಬೇಕು - ಈ ಧೃಡ ಸಂಕಲ್ಪ ಮಾಡುವುದು ಅರ್ಥಾತ್ ವ್ರತವನ್ನು ತೆಗೆದುಕೊಳ್ಳುವುದಾಗಿದೆ. ಮಧುರ ಬಾಬಾ, ಪ್ರಿಯವಾದ ಬಾಬಾ, ನನ್ನ ಬಾಬಾ ಎಂಬ ಹಾಡು ಸ್ವತಹವಾಗಿಯೇ ಮೊಳಗುತ್ತಿದ್ದರೆ ಪ್ರತ್ಯಕ್ಷತೆಯ ಧ್ವಜಾರೋಹಣವಾಗಿ ಬಿಡುವುದು.

ಸ್ಲೋಗನ್: ವಿಘ್ನ ವಿನಾಶಕರಾಗಬೇಕೆಂದರೆ ಸರ್ವ ಶಕ್ತಿಗಳಿಂದ ಸಂಪನ್ನರಾಗಿರಿ.